ಈ ಲೇಖನದ ವಿಷಯಾನುಕ್ರಮಣಿಕೆ


ದ್ವಿದಳವ್ರತ 2

ಕ್ಷೀರವ್ರತಸಮರ್ಪಣೆ 2

ದ್ವಿದಳವ್ರತದ ಸಂಕಲ್ಪ 4

# ದ್ವಿದಳವ್ರತ

## ಕ್ಷೀರವ್ರತಸಮರ್ಪಣೆ

ಚಾತುರ್ಮಾಸ್ಯದ ನಾಲ್ಕು ವ್ರತಗಳಲ್ಲಿ ಮೂರನೆಯ ವ್ರತ – ಕ್ಷೀರವ್ರತ – ಆಶ್ವಯುಜ ಶುದ್ಧ ಏಕಾದಶಿಯಂದು ಮುಗಿಯುತ್ತದೆ. ನಾಲ್ಕನೆಯ ವ್ರತ ದ್ವಿದಳವ್ರತ ಆರಂಭವಾಗುತ್ತದೆ.

ಏಕಾದಶಿಯ ದಿವಸ ದೇವರ ಪೂಜೆ ಮುಗಿದ ನಂತರ ಪರಮಾತ್ಮನ ಮುಂದೆ ನಮಸ್ಕಾರ ಮಾಡಿ ಗುರುಗಳನ್ನು, ಸಮಸ್ತ ಗುರುಪರಂಪರೆಯನ್ನು, ಶ್ರೀಮದಾಚಾರ್ಯರನ್ನು ಅವರ ಅಂತರ್ಯಾಮಿಯಾದ ಲಕ್ಷ್ಮೀಪತಿ ವೇದವ್ಯಾಸದೇವರನ್ನು ನೆನೆದು, ಭಾರತೀಪತಿ ಮುಖ್ಯಪ್ರಾಣನ ಅಂತರ್ಯಾಮಿಯಾದ ಕೃತಿಪತಿ ಪ್ರದ್ಯುಮ್ನನನ್ನು ಸ್ಮರಣೆ ಮಾಡಬೇಕು.

ಆ ಬಳಿಕ,

**ಭಾದ್ರಪದಶುದ್ಧ ಏಕಾದಶೀಮಾರಭ್ಯ**
**ಆಶ್ವೀನ ಏಕಾದಶೀಪರ್ಯಂತಂ**
**ಭಗವತಃ ತೇಜಸಾ ಮಯಾ ಕೃತೇನ**
**ಕ್ಷೀರವ್ರತೇನ**
**ಗುರ್ವಂತರ್ಗತ ಮಧ್ವಾಂತರ್ಗತ ಶ್ರೀಕೃಷ್ಣಃ**
**ಪ್ರೀಯತಾಮ್**

ಎಂದು ತುಳಸೀಸಹಿತವಾಗಿ ನೀರನ್ನು ಬಿಡಬೇಕು. ಆ ಬಳಿಕ ಕೈಜೋಡಿಸಿ

> **“ಶ್ರೀಪ್ರದ್ಯುಮ್ನ ನಮಸ್ತುಭ್ಯಂ**
> **ಮಾಸಮಾರಭ್ಯ ಯತ್ ಕೃತಮ್ ।**
> **ಇಷ್ಟದೋ ಭವ ಸರ್ವೇಶ**
> **ಗೃಹೀತ್ವಾ ತು ಪಯೋವ್ರತಮ್”**

“ಶ್ರೇಷ್ಠಕಾಂತಿಯಿಂದ ಯುಕ್ತಳಾಗ ಕೃತೀದೇವಿಯ ಒಡೆಯ ಓ ಪ್ರದ್ಯುಮ್ನನೇ, ಒಂದು ತಿಂಗಳಿನಿಂದ ನಾನು ನಿನ್ನ ಪ್ರೀತಿಯನ್ನು ಅಪೇಕ್ಷಿಸುತ್ತ ಹಾಲನ್ನು ವರ್ಜಿಸಿ ಪಯೋವ್ರತದ ಆಚರಣೆಯನ್ನು ಮಾಡಿದ್ದೇನೆ, ಸ್ವಾಮಿ. ಓ ಸಮಸ್ತ ಚರಾಚರ

ವಸ್ತುಗಳ ನಾಥನೇ, ಇಷ್ಟದೋ ಭವ. ನೀನು ನನ್ನಿಂದ ಮಾಡಿಸಿರುವ ಈ ಕ್ಷೀರವ್ರತವನ್ನು ಸ್ವೀಕರಿಸಿ ನನ್ನ ಮನಸ್ಸಿನ ಅಪೇಕ್ಷೆಗಳನ್ನು ಪೂರ್ಣ ಮಾಡು. ಜ್ಞಾನಭಕ್ತಿವೈರಾಗ್ಯಗಳನ್ನು ಕರುಣಿಸು”

ಎಂದು ಪ್ರಾರ್ಥಿಸಬೇಕು.

## ದ್ವಿದಳವ್ರತದ ಸಂಕಲ್ಪ

ಆ ನಂತರ ಆಚಮನ, ಪ್ರಾಣಾಯಾಮಗಳನ್ನು ಮಾಡಿ ದೇಶ ಕಾಲಗಳನ್ನು ಹೇಳಿ

**ಮಮ ಗುರ್ವಂತರ್ಗತ (ಪತ್ಯಂತರ್ಗತ) ಪರಮಗುರ್ವಂತರ್ಗತ ಭಾರತೀರಮಣಮುಖ್ಯಪ್ರಾಣಾಂತರ್ಗತ ಶ್ರೀವಿಷ್ಣುಪ್ರೇರಣಯಾ ಶ್ರೀವಿಷ್ಣುಪ್ರೀತ್ಯರ್ಥಂ ಆಶ್ವೀನ-ಶುದ್ಧ-ಏಕಾದಶೀಮಾರಭ್ಯ ಕಾರ್ತೀಕ-ಶುದ್ಧ-ಏಕಾದಶೀಪರ್ಯಂತಂ ಜ್ಞಾನ-ಭಕ್ತಿ-ವೈರಾಗ್ಯಾದಿ-ಮಹಾಸದ್ಗುಣ-ಅಭಿವೃದ್ಧ್ಯರ್ಥಂ ದ್ವಿದಳಧಾನ್ಯತ್ಯಾಗರೂಪಂ ಚತುರ್ಥಂ ದ್ವಿದಳವ್ರತಮಹಮಾಚರಿಷ್ಯೇ**

ಶ್ರೀಹರಿಯ ಪ್ರೀತಿಗಾಗಿ, ಜ್ಞಾನಭಕ್ತಿವೈರಾಗ್ಯಗಳ ಅಭಿವೃದ್ಧಿಗಾಗಿ, ದ್ವಿದಳಧಾನ್ಯಗಳ ತ್ಯಾಗರೂಪವಾದ ದ್ವಿದಳವ್ರತವನ್ನು ಆಚರಿಸುತ್ತೇನೆ ಎಂದು ಸಂಕಲ್ಪಮಾಡಿ ತುಳಸೀಸಹಿತವಾಗಿ ನೀರನ್ನು ಬಿಡಬೇಕು.

ಆ ಬಳಿಕ ಕೈಜೋಡಿಸಿ ಪರಮಾತ್ಮನನ್ನು ಪ್ರಾರ್ಥಿಸಬೇಕು.

> **"ಕಾರ್ತಿಕೇ ದ್ವಿದಲಂ ಧಾನ್ಯಂ**
> **ವರ್ಜಯಿಷ್ಯೇ ಸದಾ ಹರೇ ।**
> **ಇಮಂ ಕರಿಷ್ಯೇ ನಿಯಮಂ**
> **ನಿರ್ವಿಘ್ನಂ ಕುರು ಕೇಶವ"**

"ಓ ಪಾಪಗಳನ್ನು ಪರಿಹರಿಸುವ ಹರಿಯೇ, ಚಾತುರ್ಮಾಸ್ಯದ ಈ ನಾಲ್ಕನೆಯ ತಿಂಗಳಲ್ಲಿ ಎಲ್ಲ ದ್ವಿದಳ ಬಹುದಳ ಧಾನ್ಯಗಳನ್ನೂ ವರ್ಜಿಸುತ್ತೇನೆ, ಸ್ವಾಮಿ. ಬ್ರಹ್ಮರುದ್ರರನ್ನೂ ನಿಯಮಿಸುವ ಓ ಕೇಶವ, ನನ್ನ ನಾಲಿಗೆ ಮನಸ್ಸುಗಳನ್ನು ವಿಶೇಷವಾಗಿ ನಿಯಮಿಸಿ ಈ ವ್ರತ ನಿರ್ವಿಘ್ನವಾಗಿ ನಡೆಯುವಂತೆ ಮಾಡು ಸ್ವಾಮಿ.

**“ಅನಿರುದ್ಧ ಸುರೈರ್ವಂದ್ಯ
ದ್ವಿದಳವ್ರತಮುತ್ತಮಮ್ ।
ಕರೋಮಿ ಚರಮೇ ಮಾಸಿ
ನಿರ್ವಿಘ್ನಂ ಕುರು ಮೇ ಪ್ರಭೋ”**

“ಶಾಂತಿದೇವಿಯ ಪತಿಯಾದ ಅನಿರುದ್ಧನೇ, ಈ ವ್ರತಕ್ಕೆ ನಿಯಾಮಕನಾದ ಸ್ವಾಮಿಯೇ, ಚಾತುರ್ಮಾಸ್ಯದ ಈ ಕಡೆಯ ತಿಂಗಳ ಕಡೆಯ ವ್ರತವನ್ನು ನಿರ್ವಿಘ್ನವಾಗಿ ನಡೆಸು, ಒಡೆಯಾ”

ಎಂದು ಪ್ರಾರ್ಥಿಸಬೇಕು.

ಶ್ರೀಹರಿ ವಾಯುದೇವರಲ್ಲಿ, ಸಮಸ್ತತತ್ವಾಭಿಮಾನಿ ದೇವತೆಗಳಲ್ಲಿ ನಿಂತು ನಮ್ಮಿಂದ ಈ ವ್ರತವನ್ನು ಮಾಡಿಸುತ್ತಿದ್ದಾನೆ ಎಂದು ಅನುಸಂಧಾನ ಮಾಡಬೇಕು.

ಚಾತುರ್ಮಾಸ್ಯದ ನಾಲ್ಕುವ್ರತಗಳಲ್ಲಿಯೇ ಅತೀಶ್ರೇಷ್ಠ ಫಲವನ್ನು ನೀಡುವ ವ್ರತ ದ್ವಿದಳವ್ರತ. ಪರಮಾತ್ಮನ ಅನುಗ್ರಹವನ್ನು ಸಂಪಾದಿಸಿ ನೀಡುವ

ವ್ರತ. ಹೀಗಾಗಿ ಅತ್ಯಂತ ಶ್ರದ್ಧೆಯಿಂದ ಈ ವ್ರತವನ್ನು ಮಾಡತಕ್ಕದ್ದು.
ಆ ನಂತರ ಕ್ಷೀರವ್ರತವನ್ನು ಮಾಡಿರುವ ಸಜ್ಜನರಾದ ವಿಷ್ಣುಭಕ್ತರಾದ ಜ್ಞಾನಿಗಳ ಮನೆಗೆ ಹೋಗಿ ಅವರಿಗೆ ಶುದ್ಧ ಆಕಳಿನ ಹಾಲನ್ನು ದಾನ ಮಾಡಿ ಬರಬೇಕು.

ದ್ವಾದಶಿಯ ದಿವಸ ಪರಮಾತ್ಮನಿಗೆ ಹಾಲಿನ ನೈವೇದ್ಯವನ್ನು ಮಾಡಿ ಸ್ವೀಕರಿಸಬೇಕು.

ನೀವು ಮಾಡಿರುವ ಕ್ಷೀರವ್ರತ ಸಂಪನ್ನವಾಗಲಿ, ದ್ವಿದಳವ್ರತ ನಿರ್ವಿಘ್ನವಾಗಿ ನಡೆಯಲಿ ಎಂಬ ಹಾರೈಕೆಯೊಂದಿಗೆ

— ವಿಷ್ಣುದಾಸ ನಾಗೇಂದ್ರಾಚಾರ್ಯ

# <u>ವಿಶ್ವನಂದಿನಿಗೆ ಸಜ್ಜನರ ಸಹಾಯದ ಅಗತ್ಯವಿದೆ</u>

ಪರಮಾತ್ಮನನ್ನು ತಿಳಿಸಿಕೊಡುವ ದಿವ್ಯಗ್ರಂಥಗಳನ್ನು ತಿಳಿಯಾದ ಭಾಷೆಯಲ್ಲಿ ಸಜ್ಜನರಿಗೆ ತಲುಪಿಸಲು ವಿಶ್ವನಂದಿನಿ 10000 ಗಂಟೆಗಳ ಉಪನ್ಯಾಸಗಳ ಗುರಿಯನ್ನೂ, 30000 ಪುಟಗಳ ಲೇಖನದ ಗುರಿಯನ್ನೂ ಹೊಂದಿದೆ.

ವಿಶ್ವನಂದಿನಿಯ ಎಲ್ಲ ಉಪನ್ಯಾಸಗಳೂ, ಲೇಖನಗಳೂ ಪ್ರತಿಯೊಬ್ಬರಿಗೂ ಉಚಿತವಾಗಿ ಲಭ್ಯ.

ಈ ಬೃಹತ್ ಜ್ಞಾನಸತ್ರ ನಿಮ್ಮ ನೆರವಿಲ್ಲದೇ ಮುಂದುವರೆಯಲು ಸಾಧ್ಯವಿಲ್ಲ.

ಈ ಜ್ಞಾನಕಾರ್ಯಕ್ಕೆ ನೆರವು ನೀಡುವ ಸಜ್ಜನರು ಕೆಳಗಿನ ಖಾತೆಗೆ ಹಣವನ್ನು ವರ್ಗಾಯಿಸಬಹುದು

- **Account Name** **VISHWANANDINI**
- **Account Number** **35368588017**
- **Account Type** **Current Account**
- **Bank** **State Bank of India**
- **Branch** **T. Narasipura, Mysore**
- **IFSC** **SBIN0013233**

Please WhatsApp the transaction details to
**9901551491**

ಈಗಾಗಲೇ ನೆರವು ನೀಡಿದ, ನೀಡುತ್ತಿರುವ ಸಜ್ಜನರಿಗೆ
ನನ್ನ  ಮನಃಪೂರ್ವಕ ಕೃತಜ್ಞತೆಗಳು.

**ನೀವು ವಿಶ್ವನಂದಿನಿಯ ಖಾತೆಗೆ ಹಣವನ್ನು ವರ್ಗಾಯಿಸುವಾಗ**

**“ವಿಶ್ವನಂದಿನಿ ಗಮ್ಯ ತಲುಪಲಿ”**

**ಎಂದು ಗುರುದೇವತೆಗಳಿಗೆ,**
**ಶ್ರೀ ವೇದವ್ಯಾಸದೇವರಿಗೆ**
**ಪ್ರಾರ್ಥನೆ ಸಲ್ಲಿಸುವದನ್ನು ಮರೆಯಬೇಡಿ.**

ಸಜ್ಜನರ ಪ್ರಾರ್ಥನೆಯನ್ನು
ಶ್ರೀಹರಿ ಮನ್ನಿಸುತ್ತಾನೆ.

— ವಿಷ್ಣುದಾಸ ನಾಗೇಂದ್ರಾಚಾರ್ಯ

**Vishnudasa Nagendracharya**

No. 2, “Sri Madhwanuja Mandiram"
Kaveri Marga,  Hemmige Village,
Talakadu,  T Narasipura,
Mysore - 571122, Karnataka, India

nagendracharya@yahoo.co.in

WhatsApp:  9901 551 491